# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

ಓ ಎಸ್ ನಂ. 66-2016 ಪಿ . ಡಬ್ಲುಃ 1

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗಮ್ಮ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-12-2020. |

**ಪಾಟೀ ಸವಾಲುಃ ಶ್ರೀ ಬಿ.ಎಸ್.ಎ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. 1 ನೇ ಪ್ರತಿವಾದಿಯ ಗಂಡ ಇಟ್ಟಿಗೆ ಕುಯಿಸುವ ಕೆಲಸ ಹಾಗೂ ವ್ಯವಸಾಯವನ್ನು ಮಾಡುತ್ತಾರೆ. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ. ಮೊದಲನೆಯ ಮಗು ಹೆಣ್ಣುಮಾಳಾಗಿದ್ದು 2 ನೇ ಮಗು ಯಾವುದು ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ನಾನು ನನ್ನ ವಕೀಲರಿಗೆ ಎಲ್ಲಾ ವಿಷಯಗಳನ್ನು ತಿಳಿಸಿ ಪ್ರತಿವಾದಿಗಳ ವಿರುದ್ಧ ಹಾಕಿದ್ದೇನೆ ಎಂದರೆ ಸರಿ.

2. ಮೃತ ಲಿಂಗಣ್ಣನ ಹೆಂಡತಿಯ ಹೆಸರು ಪದ್ಮ. ಮೃತ ಲಿಂಗಣ್ಣಗೆ ಇಬ್ಬರು ಹೆಣ್ಣುಮಕ್ಕಳು ಅದರಲ್ಲಿ ಒಬ್ಬಳು ಮಾತ್ರ ಜೀವಿತ ಇದ್ದು ಮತ್ತೊಬ್ಬಳು ಮೃತಪಟ್ಟಿರುತ್ತಾಳೆ. ಸದರಿ ಲಿಂಗಣ್ಣ ನನ್ನ ಬಳಿ ಹಣಕಾಸಿನ ವ್ಯವಹಾರ ಮಾಡಿದ್ದ ಎಂದರೆ ಸರಿ. ಸದರಿ ಲಿಂಗಣ್ಣನಿಗೆ ಸುಮಾರು 40-50 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಿಂಗಣ್ಣ ಮೈಸೂರಿನಲ್ಲಿ 3 ಎಕರೆಯಲ್ಲಿ ಒಂದು ಲೇಔಟ್ ನಿರ್ಮಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆ ಹೂಡಿದ ನಂತರ ಎಲ್.ಮಂಜು ಎಂಬುವವರನ್ನು ಈ ದಾವೆಗೆ ಅವಶ್ಯಕ ಪಕ್ಷಗಾರರನ್ನಾಗಿ ಮಾಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ನನಗೆ ನೆನಪಿಲ್ಲ. ಆ ಅರ್ಜಿಯಲ್ಲಿ ನಾನು ಎಲ್.ಮಂಜು ಎಂಬುವವರನ್ನು ಪಕ್ಷಗಾರನನ್ನಾಗಿ ಮಾಡಬೇಕು ಎಂದು ಕೋರಿದ್ದೆ, ಆದರೆ ಆತ ಯಾರು ಎಂದು ನನಗೆ ಗೊತ್ತಿಲ್ಲ.

3. ಮೃತ ಲಿಂಗಣ್ಣ ತನ್ನ ಹೊಸ ಮನೆಗೆ ಹೋಗುವ ಸಲುವಾಗಿ ನನ್ನಿಂದ ರೂ.5,00,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದರು. ಸದರಿ ಸಾಲದ ಮೊತ್ತದಲ್ಲಿ ರೂ.1,50,000/- ಗಳನ್ನು ಮರುಪಾತಿ ಮಾಡಿದ್ದರು, ಉಳಿದ ರೂ.3,50,000/- ಮೊತ್ತಕ್ಕೆ ಚೆಕ್ಕನ್ನು ನೀಡಿದರು. ನಾನು ಒಂದು ಜಮೀನನ್ನು ಮೃತ ಲಿಂಗಣ್ಣನಿಗೆ ರೂ.24,00,000/- ಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಆ ಜಮೀನನ್ನು ಮಾರಾಟ ಮಾಡಿ 6 ವರ್ಷಗಳಾಗಿವೆ. ನಾನು ಯಾವ ವರ್ಷದಲ್ಲಿ ಮೃತ ಲಿಂಗಣ್ಣಿನಿಗೆ ಮೇಲೆ ಹೇಳಿದ ಸಾಲ ನೀಡಿದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ 6 ವರ್ಷಗಳ ಹಿಂದೆ ಸಾಲ ನೀಡಿರುತ್ತೇನೆ. ಸದರಿ ಲಿಂಗಣ್ಣ ಮೇಲೆ ಹೇಳಿದ ಕ್ರಯದ ಮೊತ್ತ ಒಟ್ಟು24,00,000/- ಗಳನ್ನು ಪಾವತಿ ಮಾಡಿ ನನ್ನ ಜಮೀನನ್ನು ಕ್ರಯಕ್ಕೆ ಪದೆದಿರುತ್ತಾರೆ ಎಂದರೆ ಸರಿ

4. ನಾನು ಮೃತ ಲಿಂಗಣ್ಣಿನಿಗೆ ರೂ.5,00,000/- ಗಳನ್ನು ಸಾಲನೀಡಿದಾಗ ಆತ ಭದ್ರತೆಗೆಂದು ನಿಪಿ-1 ನ್ನು ಬರೆದುಕೊಟ್ಟಿದ್ದರು. ಲಿಂಗಣ್ಣ ಏನು ವಿದ್ಯಾಭ್ಯಾಸಾ ಮಾಡಿದ್ದರು ಎಂದು ಹಾಗೂ ಅವರಿಗೆ ಓದು ಬರೆಯಲು ಬರುತ್ತಿತ್ತಾ ಎಂದು ನನಗ ಗೊತ್ತಿಲ್ಲ. ನಾನು ದೇವರಸನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಆಗಿದ್ದೆ ಎಂದರೆ ಸರಿ. ನಾನು ಆಗ ಅಧ್ಯಕ್ಷಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಾಖಲೆಗಳಿಗೆ ಸಹಿ ಮಾಡುತ್ತಿದ್ದೆ ಎಂದರೆ ಸರಿ. ಹಾಗೆ ಆ ಕರ್ತವ್ಯ ನಿಮಿತ್ತ ಕೆಲವು ಬಾರಿ ಚೆಕ್ಕುಗಳಿಗೂ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-1 ನ್ನು ರಲ್ಲಿರುವ ಒಕ್ಕಣಿಕೆಗಳನ್ನು ಮೃತ ಲಿಂಗಣ್ಣಿ ಬರೆದುಕೊಟ್ಟಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ದಿನಾಂಕವನ್ನು ಮೃತ ಲಿಂಗಣ್ಣ ಬರೆದುಕೊಟ್ಟರು ಎಂದು ನನಗೆ ಗೊತ್ತಿಲ್ಲ.

5. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಮೇಲೆ ಯಾವುದೇ ಬಡ್ಡಿಯನ್ನು ಪಾವತಿಸಿ ಎಂದು ನಾನು ಮೃತ ಲಿಂಗಣ್ಣಿನಿಗೆ ಹೇಳಿರಲಿಲ್ಲ. ನಾನು ನನ್ನವಾದ ಪತ್ರದಲ್ಲಿ ಸದರಿ ಸಾಲದ ಮೇಲೆ ಮೃತ ಲಿಂಗಣ್ಣ ಬಡ್ಡಿ ಪಾವತಿಸುವಂತೆ ಒಪ್ಪಿದ್ದರು ಎಂದು ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೃತ ಲಿಂಗಣ್ಣನಿಗೆ ಸದರಿ ಸಾಲ ನೀಡುವಾಗ ಕಡಕೊಳ ಗ್ರಾಮದ ಇಬ್ಬರು ವ್ಯಕ್ತಿಗಳು ಹಾಜರಿದ್ದರು ಅವರ ಹೆಸರು ನನಗೆ ನೆನಪಿಲ್ಲ. ನಾನು ಸದರಿ ಸಾಲವನ್ನು ನಗದು ರೂಪದಲ್ಲಿ ಮೃತ ಲಿಂಗಣ್ಣನಿಗೆ ಪಾವತಿ ಮಾಡಿದ್ದೇನೆ ಯಾವ ಮುಖ ಬೆಲೆಯ ನೋಟುಗಳಿಂದ ಪಾವತಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ನನಗೆ ಹಣದ ವ್ಯವಹಾರ ಮಾಡಿ

ರೂಡಿ ಇದೆ ಎಂದರೆ ಸರಿ. ನನ್ನ ತಮ್ಮ ರಾಮಸ್ವಾಮಿ ಜಮೀನು ಮಾರಿದ್ದ, ಆ ಹಣದಿಂದ ರೂ.5,00,000/- ಗಳನ್ನು ತೆಗೆದುಕೊಂಡು ಬಂದು ನಾನು ಸದರಿ ಸಾಲವನ್ನು ಮೃತ ಲಿಂಗಣ್ಣನಿಗೆ ನೀಡಿದ್ದೇನೆ.

6. ಮೃತ ಲಿಂಗಣ್ಣನ ಕಾರಿನ ಚಾಲಕ ಎಲ್.ಮಂಜು ಎಂದರೆ ಸರಿ. ಸದರಿ ಎಲ್.ಮಂಜು ದೇವರಸನಹಳ್ಳಿ ಗ್ರಾಮದ ಕೃಷ್ಣಪ್ಪನವರ ಮಗ ಹಾಗೂ ಅವರು ಹಾಲಿನ ವ್ಯಾಪಾರ ನಡೆಸುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಾನು ಮೊದಲು ಹಾಲಿನ ವ್ಯಾಪಾರ ಮಾಡುತ್ತಿದ್ದೆ ಹಾಗೆ ಸದರಿ ಕೃಷ್ಣಪ್ಪನವರು ಜೊತೆ ನನಗೆ ಪರಿಚಯ ಇದ ಎಂದರೆ ಸರಿ ಹಾಗೂ ಅವರು ನನ್ನ ಜಮೀನಿನ ಬಾಜುದಾರರು ಎಂದರೆ ಸರಿ. ಸದರಿ ಕೃಷ್ಣಪ್ಪನವರು ದೇವರಸನಹಳ್ಳಿ ಗ್ರಾಮದವರು ಎಂದರೆ ಸರಿ. ನಾನು ಮೊದಲಿಗೆ ಎಲ್.ಮಂಜು ಮೃತ ಲಿಂಗಣ್ಣನ ಮಗ ಎಂದು ತಿಳಿದಿದ್ದೆ ನಂತರ ನನಗೆ ಆತ ದೇವರಸನಹಳ್ಳಿ ಕೃಷ್ಣಪ್ಪನವರ ಮಗ ಎಂದು ಗೊತ್ತಾಯಿತು. ನಾನು ನ್ಯಾಯಾಲಯದಲ್ಲಿ ಸದರಿ ಎಲ್.ಮಂಜು ಮೃತ ಲಿಂಗಣ್ಣನ ಮಗ ಎಂದು ಹೇಳಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆನಂತರ ನನಗೆ ಆತ ಮೃತ ಲಿಂಗಣ್ಣನ ಮಗನಲ್ಲ ಎಂದು ಗೊತ್ತಾಯಿತು ಎಂದು ನುಡಿಯುತ್ತಾರೆ. ಮೃತ ಲಿಂಗಣ್ಣನ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ.

7. ಮೃತ ಲಿಂಗಣ್ಣ ರೂ.1,50,000/- ಗಳನ್ನು ನನಗೆ ಮರುಪಾವತಿ ಮಾಡಿದ ದಿನ ಪಾವತಿ ಬಗ್ಗೆ ಷರಾ ಬರೆದುಕೊಡಲಿಲ್ಲ ಎಂದರೆ ಸರಿ. ಮೃತ ಲಿಂಗಣ್ಣ ನಿಪಿ-1 ರ ಮೇಲೆ 3,50,000/- ತಾನು ಮರುಪಾವತಿ ಮಾಡಬೇಕು ಎಂದು ಹೇಳಿ ಬರೆದುಕೊಟ್ಟರು. ನನಗೆ ನಿಪಿ-1 ನೀಡದ 4 ತಿಂಗಳ ನಂತರ ಸದರಿ ಲಿಂಗಣ್ಣನ ಮೃತಪಟ್ಟರು ನಾನು ಆಗ ಅವರ ಮನೆಗೆ ಹೋಗಿ ಆತನ ಹೆಂಡತಿಯನ್ನು ಸಾಲ ಮರುಪಾವತಿ ಮಾಡುವಂತೆ ಕೇಳಿಕೊಂಡೆ. ನಾನು ಆ ಅವಧಿಯಲ್ಲಿ ಲಿಂಗಣ್ಣನಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ. ನಿಪಿ-1 ಮೃತ ಲಿಂಗಣ್ಣನ ಖಾತೆಗೆ ಸಂಬಂಧಪಟ್ಟ ಚೆಕ್ ಎಂದರೆ ನನಗೆ ಗೊತ್ತಿಲ್ಲ. ನಿಪಿ-1ನ್ನು ನಾನು ನಗದೀಕರಣ ಪಡಿಸಿಕೊಳ್ಳಲು ಬ್ಯಾಂಕಿಗೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೃತ ಲಿಂಗಣ್ಣನವರ ಖಾತೆಯಲ್ಲಿ ಹಣ ಇದೆಯೋ ಇಲ್ಲವೋ ಎಂದು ನಾನು ತಿಳಿದುಕೊಳ್ಳಲಿಲ್ಲ ಎಂದರೆ ಸರಿ. ಮೃತ ಲಿಂಗಣ್ಣ ಯಾವ ದಿನಾಂಕಂದು ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ರೂ.3,50,000/-

ಗಳಿಗೆ ಎಂದು ಚೆಕ್ಕನ್ನು ಬರೆದುಕೊಟ್ಟದ್ದನ್ನು ಹೊರತಪಡಿಸಿ ಮೃತ ಲಿಂಗಣ್ಣ ನನಗೆ ಇನ್ನಾವುದೇ ದಾಖಲೆಗಳನ್ನು ಬರದುಕೊಟ್ಟಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಶವನ್ನು ಕೋರಿದ್ದು ಸಮಯಾವಾಕಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**